# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 366 |
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 21-12-2022 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಇಲಾಖೆ |

| ಕ್ರ.ಸಂ | ಪ್ರಶ್ನೆ | ಉತ್ತರಗಳು |
|---|---|---|
| ಅ) | ಮೈಸೂರಿನಿಂದ ಬನ್ನೂರು ಮಾರ್ಗವಾಗಿ ಮಳವಳ್ಳಿವರೆಗಿನ ರಸ್ತೆ ತುಂಬಾ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮೈಸೂರಿನಿಂದ ಬನ್ನೂರು ಮಾರ್ಗವಾಗಿ ಮಳವಳ್ಳಿವರೆಗಿನ ರಸ್ತೆಯು ಕೊರಟಗೆರೆ - ಬಾವಲಿ ರಾಜ್ಯ ಹೆದ್ದಾರಿ-33 ರಸ್ತೆಯಾಗಿದ್ದು ಸದರಿ ರಸ್ತೆಯ ಸರಪಳಿ 142.515 ರಿಂದ 181.53 ಕಿ.ಮೀ ವರೆಗೆ ಒಟ್ಟು 39.015 ಕಿ.ಮೀ ರಸ್ತೆಯು ಮಂಡ್ಯ ಹಾಗೂ ಮೈಸೂರು ಜಿಲ್ಲೆಯಲ್ಲಿ ಹಾದುಹೋಗುತ್ತದೆ.<br>**<u>ಮಂಡ್ಯ ಜಿಲ್ಲೆ;</u>** |
| ಆ) | ಬಂದಿದ್ದಲ್ಲಿ ವಾಹನ ಸಂಚಾರಕ್ಕೆ ತುಂಬಾ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | • ಮಳವಳ್ಳಿ ತಾಲ್ಲೂಕಿನಲ್ಲಿ ಹಾದುಹೋಗುವ ಈ ರಸ್ತೆಯ ಸರಪಳಿ 142.515 ರಿಂದ 154.77 ಕಿ.ಮೀ.ವರೆಗೆ ರಸ್ತೆಯ ಮೇಲ್ಮೈನಲ್ಲಿ ಗುಂಡಿಗಳು ಉಂಟಾಗಿರುತ್ತವೆ.<br>• ಈ ಭಾಗದ ರಸ್ತೆಯನ್ನು ದುರಸ್ತಿಗಾಗಿ 2022-23 ನೇ ಸಾಲಿನಲ್ಲಿ ನಿರ್ವಹಣೆ ಲೆಕ್ಕಶೀರ್ಷಿಕೆಯಡಿ ರೂ.12.30 ಲಕ್ಷಗಳು ಮಂಜೂರಾಗಿದ್ದು, ರಸ್ತೆ ನಿರ್ವಹಣೆ ಕಾಮಗಾರಿಯು (ರಸ್ತೆ ಗುಂಡಿ ಮುಚ್ಚುವ) ಪ್ರಗತಿಯಲ್ಲಿರುತ್ತದೆ. |
| ಇ) | ಹಾಗಾದಲ್ಲಿ, ದುರಸ್ಥಿ ಕಾಮಗಾರಿಯ ಅಂದಾಜು ಮೊತ್ತವೆಷ್ಟು (ವಿವರ ನೀಡುವುದು) | • ಸದರಿ ರಸ್ತೆ ಮರು ಡಾಂಬರೀಕರಣಕ್ಕಾಗಿ ರೂ.1000.00 ಲಕ್ಷಗಳಿಗೆ ಅನುದಾನ ತಗಲಬಹುದೆಂದು ಅಂದಾಜಿಸಲಾಗಿದೆ. |
| ಈ) | ಯಾವ ಕಾಲಮಿತಿಯಲ್ಲಿ ದುರಸ್ಥಿ ಮಾಡಲಾಗುವುದು? | **<u>ಮೈಸೂರು ಜಿಲ್ಲೆ;</u>**<br>• ಪ್ರಸ್ತಾಪಿತ ರಸ್ತೆಯು ಕೊರಟಗೆರೆ-ಬಾವಲಿ ರಸ್ತೆ ರಾಜ್ಯ-33 ರ ಭಾಗವಾಗಿದ್ದು, ಸರಪಳಿ 154.77 ರಿಂದ 181.53 ಕಿ.ಮೀ ವರೆಗೆ (ಒಟ್ಟು 26.76 ಕಿ.ಮೀ) ಮೈಸೂರು ವಿಭಾಗ ವ್ಯಾಪ್ತಿಗೆ ಒಳಪಡುತ್ತದೆ. (ಮೈಸೂರಿನಿಂದ ಹೆಗ್ಗೂರು ಗೇಟ್‌ವರೆಗೆ)<br>• ಸದರಿ ರಸ್ತೆಯ ಪ್ರಾರಂಭದ ಸರಪಳಿ 154.77 (ಹೆಗ್ಗೂರು ಗೇಟ್) ರಿಂದ ಮುಕ್ತಾಯದ ಸರಪಳಿ 169.07 ಕಿ.ಮೀ ವರೆಗೆ (ಮಾದೇಗೌಡನ ಹುಂಡಿ ಗೇಟ್) ಒಟ್ಟಾರೆ ರಸ್ತೆಯ ಉದ್ದ 14.30 ಕಿ.ಮೀ **ತಿ.ನರಸೀಪುರ ವಿಧಾನಸಭಾ ಕ್ಷೇತ್ರದ** ವ್ಯಾಪ್ತಿಗೆ ಒಳಪಡುತ್ತದೆ.<br>• ಸದರಿ ರಸ್ತೆಯನ್ನು 2022-23 ನೇ ಸಾಲಿನಲ್ಲಿ ನಿರ್ವಹಣೆ ಲೆಕ್ಕಶೀರ್ಷಿಕೆಯಡಿ ರೂ.17.00 ಲಕ್ಷಗಳು ಮಂಜೂರಾಗಿದ್ದು, ರಸ್ತೆ ನಿರ್ವಹಣೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br>• 2022-23 ನೇ ಸಾಲಿನಲ್ಲಿ ಸದರಿ ರಸ್ತೆಗೆ ಮರು ಡಾಂಬರೀಕರಣ ಸರಪಳಿ 155.93 ರಿಂದ 161.85 ಮತ್ತು 163.65 ರಿಂದ 164.00 ಕಿ.ಮೀ.ವರೆಗೆ (ಒಟ್ಟು 6.27 ಕಿ.ಮೀ) ಕಾಮಗಾರಿಯನ್ನು ಕೈಗೊಳ್ಳಲು ರೂ.500.00 ಲಕ್ಷಗಳು ಮಂಜೂರಾಗಿದ್ದು, ಟೆಂಡರ್ ಪ್ರಕ್ರಿಯೆಯು ಅಂತಿಮ ಹಂತದಲ್ಲಿದ್ದು, ನಿಗಧಿತ ಕಾಲಮಿತಿಯೊಳಗೆ ಮರು ಡಾಂಬರೀಕರಣ ಕೆಲಸವನ್ನು ಪೂರ್ಣಗೊಳಿಸಲಾಗುವುದು. |